# ಅಕೋ ಹಾಂಗಿಹನೆ, ಇಕೋ ಹೀಗಿಹನೆ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.: Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The lyrics mentioned without highlights are as per Ref. 1. The lyrics mentioned in yellow highlights are as per Ref. 2. They are slightly different and are given separately.
4. **Note:** The singer has followed the lyrics as in Ref. 2.

| | |
|---|---|
| ರಾಗ ಮಧ್ಯಮಾವತಿ ತಾಳ ಆದಿ | ರಾಗ ಸಾರಂಗ ತಾಳ ಆದಿ |
| ಅಕೋ ಹಾಂಗಿಹನೆ, ಇಕೋ ಹೀಂಗಿಹನೆ<br>ಪರಬ್ರಹ್ಮ ನಾರಾಯಣ ಹ್ಯಾಂಗಿಹಾನೆಂದರೆ \|\| ಪ \|\| | ಅಕೋ ಹಾಗಿಹಾನೆ ಇಕೋ ಹೀಗಿಹಾನೆ |
| ಕಾಲಿಲ್ಲದೆ ನಡೆಸುವ ಕೈಯಿಲ್ಲದೆ ಹಿಡಿಸುವ<br>ಹಲ್ಲಿಲ್ಲದೆ ತಿನಿಸುವ ಹೊಟ್ಟೆಲ್ಲದೆ ಉಣಿಸುವ \|\| 1 \|\| | ಕಾಲಿಲ್ಲದೆ ನಡೆಸುವ ಕೈಯಿಲ್ಲದೆ ಹಿಡಿಸುವ<br>ಹಲ್ಲಿಲ್ಲದೆ ತಿನಿಸುವ ಹೊಟ್ಟೆಲ್ಲದೆ ಉಣಿಸುವ |
| ಕಣ್ಣಿಲ್ಲದೆ ಕಾಣಿಸುವ, ಕಿವಿಯಿಲ್ಲದೆ ಕೇಳಿಸುವ<br>ಕಣ್ಣಿಗೆ ಕಾಣಿಸದಂತೆ ಒಳಗೆ ಹೊರಗೆ ತುಂಬಿರುವ \|\| 2 \|\| | ಕಣ್ಣಿಲ್ಲದೆ ಕಾಣಿಸುವ, ಕಿವಿಯಿಲ್ಲದೆ ಕೇಳಿಸುವ<br>ಕಾಣಿಸಿಕೊಳ್ಳನೀತ ಒಳಗೆ ಹೊರಗೆ ತಿರುಗುವ |
| ಶ್ವೇತ ದ್ವೀಪದಲಿ ಕುಳಿತಾನಂತಾಸನದಿ ಮಲಗಿದ<br>ಖ್ಯಾತ ವೈಕುಂಠದಲಿ ನಿಂತ ನಾಥ ಪುರಂದರ ವಿಠಲ \|\| 3 \|\| | ಶ್ವೇತ ದ್ವೀಪದಲ್ಲಿ ನಿಂತು ಅನಂತಾಸನದಲಿ ಮಲಗಿ<br>ನಿತ್ಯ ವೈಕುಂಠ ವಾಸ ಪುರಂದರ ವಿಠ್ಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಶ್ರೀ ಹರಿಯ ಮೂಲ ಸ್ವರೂಪವನ್ನು ದಾಸರು ಇಲ್ಲಿ ವರ್ಣಿಸಿದ್ದಾರೆ. (ಕೇನೋಪನಿಷತ್ - ೩ ರಿಂದ ೯)

**ಪರಬ್ರಹ್ಮ** = ಪರಾತ್ಪರ, ಬ್ರಹ್ಮ ರುದ್ರಾದಿಗಳಿಗಿಂತ ಶ್ರೇಷ್ಠನಾದವನು ಶ್ರೀ ಹರಿ

**ಶ್ವೇತ ದ್ವೀಪ** – ಮಹಾಭಾರತದ ಶಾಂತಿ ಪರ್ವದಲ್ಲಿ ಇದು ವಿಷ್ಣುವಿನ ವಾಸಸ್ಥಾನವೆಂದು ಹೇಳಿದೆ. ಇಲ್ಲಿಯೇ ನಾರದರಿಗೆ ನಾರಾಯಣನು ಭಾಗವತ ಧರ್ಮವನ್ನು ಬೋಧಿಸಿದ್ದು: ಬೋಧಿಸುವಾಗ ಕುಳಿತಿರುವ ಭಂಗಿ.

**ಅನಂತಾಸನ** – ಆದಿಶೇಷನ ಶಯ್ಯೆ; ಇಲ್ಲಿ ಮಲಗಿರುವ ಭಂಗಿ.

**ವೈಕುಂಠ** – ವಿಷ್ಣುವಿನ ನೆಲೆಮನೆ; ಇಲ್ಲಿ ನಿಂತಿರುವ ಭಂಗಿ. ಇವು ಮೂರೂ ವಿಷ್ಣುವಿನ ಸ್ಥಾನಗಳೆಂದು ಪ್ರತೀತಿ.

**ಶ್ರೀರಂಗ ದ್ವೀಪವು** ಶ್ವೇತ ದ್ವೀಪವೆಂದು ಬಣ್ಣಿಸಿದ್ದಾರೆ

**Classification:** Keerthane

**Ankita:** purandara vittala

**Location:** Srirangam, TN

**Category:** Vishnu Stuti, Moola Rupa, aNu rUpa

**Sub-Category:** Vishnu, vaikunta, brahma, parabrahma, kannu, Narayana, kivi, aNu

**Pravachana:** NA

**Explanation:** NA